# ಅಪಸ್ಮಾರ ಇರಲಿ ಎಚ್ಚರ



ಅಪಸ್ಮಾರ ಅಥವಾ ಮೂರ್ಛೆರೋಗ ಸಾಮಾನ್ಯ ಕಾಯಿಲೆ. ರೋಗದ ಸರಿಯಾದ ಪತ್ತೆ ಮತ್ತು ಸೂಕ್ತ ಚಿಕಿತ್ಸೆಯಿಂದ ಇದನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

**■ ಉಮಾ ಅನಂತ್**

ಅಪಸ್ಮಾರ ಎಂಬುದು ನರಸಂಬಂಧಿ ವ್ಯಾಧಿ. ಹಲವು ರಾತ್ರಿಗಳು ನಿರಂತರ ನಿದ್ದೆಗೆಟ್ಟರೆ, ಸತತವಾಗಿ ಕಂಠಮಟ್ಟ ಕುಡಿಯುತ್ತಿದ್ದರೆ, ತಲೆಗೆ ಮುಖ್ಯವಾಗಿ ಮೆದುಳಿಗೆ ಗಾಯವಾಗಿದ್ದರೆ, ನ್ಯುಮೋನಿಯಾವೂ ಸೇರಿದಂತೆ ವೈರಲ್ ಜ್ವರ ಬಂದು ಮೆದುಳಿಗೆ ಸೋಂಕು ತಗುಲಿದ್ದರೆ, ಜಂತುಗಳಿಂದ ಮೆದುಳಿಗೆ ಸೋಂಕು ಆಗಿದ್ದರೆ ಅಪಸ್ಮಾರ (ಎಪಿಲೆಪ್ಸಿ) ಬರುತ್ತದೆ.

ಅಪಸ್ಮಾರದಲ್ಲಿ ಹಲವು ವಿಧಗಳಿದ್ದರೂ ಮಕ್ಕಳಲ್ಲಿ ಸಾಮಾನ್ಯವಾಗಿ 5ರಿಂದ 15 ವರ್ಷದೊಳಗಿನ ಮಕ್ಕಳಲ್ಲಿ ನರಸಂಬಂಧಿ ಅಪಸ್ಮಾರ ಕಂಡುಬರುತ್ತದೆ. ಇದನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ಸಂಪೂರ್ಣ ಗುಣಪಡಿಸಬಹುದು. ವಯಸ್ಕರಲ್ಲಿ ಮತ್ತು ವೃದ್ಧರಲ್ಲಿ ಕಂಡುಬರುವ ಅಪಸ್ಮಾರ ತೀವ್ರ ಸ್ವರೂಪದ್ದಾಗಿದ್ದು ನಿರಂತರ ಚಿಕಿತ್ಸೆಯ ಅಗತ್ಯವಿದೆ. ಮಾತ್ರೆ, ಇಂಜೆಕ್ಷನ್‌ಗಳ ಮೂಲಕ ಗುಣಪಡಿಸಲಾಗದೇ ಇರುವ ಅಪಸ್ಮಾರಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವೂ ಇದೆ.

ಮಕ್ಕಳಲ್ಲಿ ತೀವ್ರ ಸ್ವರೂಪದ ಜ್ವರ ಬಂದು ಐದಾರು ದಿನಕ್ಕೆ ಮೂರ್ಛೆ ರೋಗ ಬರುವ ಸಾಧ್ಯತೆ ಇದೆ. ಆರು ವರ್ಷದಿಂದ 13 ವರ್ಷದೊಳಗಿನ ಮಕ್ಕಳಲ್ಲಿ ಇದು ಹೆಚ್ಚು. 13 ವರ್ಷ ದಾಟಿದ ಬಳಿಕ ಮೂರ್ಛೆರೋಗ ಕಂಡು ಬರದೇ ಇರಬಹುದು. ಸೂಕ್ತ ಚಿಕಿತ್ಸೆಯಿಂದ ಮಕ್ಕಳು ಈ ಸಮಸ್ಯೆಯಿಂದ ಮುಕ್ತರಾಗಬಹುದು.

'ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ಅಪಸ್ಮಾರಕ್ಕೆ ಉತ್ತಮ ಔಷಧಿಗಳಿವೆ. ಈಗ ಮೂಗಿನ ಮೂಲಕ ಇನ್‌ಹೇಲ್ ಮಾಡುವ ಔಷಧಿ ಬಂದಿದೆ. ಸೂಕ್ತವಾದ ಇಂಜೆಕ್ಷನ್ ಇದೆ. ದೇಶದಲ್ಲಿ 1.20 ಕೋಟಿ ಅಪಸ್ಮಾರ ರೋಗಿಗಳಿದ್ದಾರೆ. ಆರಂಭಿಕ ಹಂತದಲ್ಲಿ ಚಿಕಿತ್ಸೆಗೆ ಚೆನ್ನಾಗಿ ಸ್ಪಂದಿಸುತ್ತಾರೆ. ಮೆದುಳಿನ ಸಮಸ್ಯೆಯಿಂದ ಅಪಸ್ಮಾರ ಉಂಟಾದರೆ ಶಸ್ತ್ರಚಿಕಿತ್ಸೆ ಉತ್ತಮ. ಅತ್ಯಾಧುನಿಕ ಚಿಕಿತ್ಸೆಗಳು ಈಗ ಲಭ್ಯವಿರುವುದರಿಂದ ಈ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ' ಎಂದು ಹೇಳುತ್ತಾರೆ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ನರರೋಗ ಮತ್ತು ಅಪಸ್ಮಾರ ತಜ್ಞರಾದ ಡಾ. ರಾಘವೇಂದ್ರ ಎಸ್.

ಕರ್ನಾಟಕದಲ್ಲಿ ಸುಮಾರು ಆರು ಲಕ್ಷ ಮಂದಿ ಅಪಸ್ಮಾರ ರೋಗಿಗಳಿದ್ದು ವಿಕ್ರಮ್ ಆಸ್ಪತ್ರೆ ಒಂದರಲ್ಲೇ ತಿಂಗಳಿಗೆ ಸುಮಾರು 600 ರೋಗಿಗಳು ಚಿಕಿತ್ಸೆ ಪಡೆಯುತ್ತಾರೆ ಎಂದು ವಿವರ ನೀಡುವ ಇವರು, ರಾಜ್ಯದಲ್ಲಿ ಮೂರ್ಛೆ ರೋಗಕ್ಕೆ ಸರಿಯಾದ ಚಿಕಿತ್ಸೆ ನೀಡಲು ಉತ್ತಮ ವೈದ್ಯಕೀಯ ಸೌಲಭ್ಯ ಇರುವ ಆಸ್ಪತ್ರೆಗಳ ಸಂಖ್ಯೆ ಕಡಿಮೆ. ಅಲ್ಲದೆ ರೋಗ ಪತ್ತೆಯೂ ಬೇಗ ಆಗದೇ ಇರುವುದರಿಂದ ಸಮಸ್ಯೆ ಉಲ್ಬಣವಾಗುತ್ತಿದೆ. ನಗರ, ಪಟ್ಟಣ, ಹಳ್ಳಿಗಳಲ್ಲಿ ಅಪಸ್ಮಾರ ರೋಗಕ್ಕೆ ಕಾರಣ, ಪತ್ತೆ, ಚಿಕಿತ್ಸೆ ಬಗ್ಗೆ ಅರಿವು ಮೂಡಿಸಬೇಕಾಗಿದೆ' ಎನ್ನುತ್ತಾರೆ.

'ಒಟ್ಟು ಅಪಸ್ಮಾರ ರೋಗಿಗಳಲ್ಲಿ ಶೇ.60ರಷ್ಟು ಮಂದಿಗೆ ಒಂದೇ ಒಂದು ಮಾತ್ರೆಯಿಂದ ಉಪಚಾರ ಮಾಡಿದರೆ ಗುಣವಾಗಬಹುದು. ಶೇ.20ರಷ್ಟು ರೋಗಿಗಳಿಗೆ ವಿವಿಧ ರೀತಿಯ ಪರೀಕ್ಷೆಗಳು ಜತೆಗೆ 2–3 ವಿಧದ ಔಷಧಿಯ ಅಗತ್ಯವಿರುತ್ತದೆ. ಅಪಸ್ಮಾರ ತೀವ್ರ ಸ್ವರೂಪಕ್ಕೆ ತಲುಪಿದ ಶೇ.20ರಷ್ಟು ರೋಗಿಗಳಿಗೆ ಮೆದುಳಿನ ಶಸ್ತ್ರಚಿಕಿತ್ಸೆಯೊಂದೇ ಪರಿಹಾರ' ಎನ್ನುತ್ತಾರೆ ಡಾ. ರಾಘವೇಂದ್ರ.

'ಮೂರ್ಛೆ ರೋಗಕ್ಕೆ ಚಿಕಿತ್ಸೆ ನೀಡಲು ತಜ್ಞ ವೈದ್ಯರ, ನರರೋಗ ತಜ್ಞರ, ಮನೋವೈದ್ಯರ ಅಗತ್ಯವಿದೆ. ಶಸ್ತ್ರಚಿಕಿತ್ಸೆಗೂ ನುರಿತ ವೈದ್ಯರ ತಂಡ ಬೇಕಾಗುತ್ತದೆ. ರೋಗ ಸಂಪೂರ್ಣ ಗುಣವಾಗಲು ದೀರ್ಘಕಾಲದ ಚಿಕಿತ್ಸೆಯ ಅಗತ್ಯವಿದೆ. ಇದಕ್ಕೆ ತಗಲುವ ವೆಚ್ಚವೂ ದುಬಾರಿಯಾದುದು' ಎಂದು ಮಾಹಿತಿ ನೀಡುತ್ತಾರೆ ಇದೇ ಆಸ್ಪತ್ರೆಯ ಅಪಸ್ಮಾರ ವಿಭಾಗದ ನರರೋಗ ಶಸ್ತ್ರಚಿಕಿತ್ಸಾ ತಜ್ಞ ಡಾ. ಚಂದ್ರಮೌಳಿ.

'ಮೂರ್ಛೆ ರೋಗವನ್ನು ತಪ್ಪಾಗಿ ಪರೀಕ್ಷೆ ಮಾಡುವ ವೈದ್ಯರೂ ಇದ್ದಾರೆ. ಇದು ಅಪಸ್ಮಾರ ಎಂದು ಪತ್ತೆ ಹಚ್ಚಲು ಅಸಮರ್ಥರಾಗಿ ಬೇರೇ ರೋಗವೆಂದು ಪರಿಗಣಿಸಿ ಔಷಧಿ ನೀಡುವುದರಿಂದ ಅಪಸ್ಮಾರ ರೋಗ ತೀವ್ರ ಸ್ವರೂಪಕ್ಕೆ ಹೋಗಿರುವ ಉದಾಹರಣೆಗಳೂ ಇವೆ. ಹೀಗಾಗಿ ರೋಗ ಪತ್ತೆಯನ್ನು ವೈದ್ಯರು ಸರಿಯಾಗಿ ಮಾಡಬೇಕು.ಇದಕ್ಕೆ ವೈದ್ಯರಿಗೆ ಸೂಕ್ತ ತರಬೇತಿಯ ಅಗತ್ಯವೂ ಇದೆ' ಎಂದು ಹೇಳುತ್ತಾರೆ ನರರೋಗ ತಜ್ಞ ಡಾ. ರಾಜೇಶ್ ಬಿ.ಅಯ್ಯರ್.

'ಭಾರತದಲ್ಲಿ ಅಪಸ್ಮಾರ ರೋಗದ ಬಗ್ಗೆ ಕಾಳಜಿ ಮತ್ತು ರೋಗಿಯ ಆರೈಕೆ ಬಗ್ಗೆ ಹೆಚ್ಚಿನ ಒತ್ತು ನೀಡುವ ಅಗತ್ಯವಿದೆ. ಅಪಸ್ಮಾರ ರೋಗಕ್ಕೆ ಇತ್ತೀಚೆಗೆ ಬಂದಿರುವ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ವೈದ್ಯರಲ್ಲಿ ಹೆಚ್ಚು ಜಾಗೃತಿ ಮೂಡಿಸುವ ಅಗತ್ಯವಿದೆ. ವೈದ್ಯಕೀಯ ಸಮಾವೇಶ ನಡೆಸುವ ಮೂಲಕ ಅರಿವು ಮೂಡಿಸಬಹುದು. ಅಪಸ್ಮಾರ ಅಥವಾ ಮೂರ್ಛೆ ರೋಗ ವೈದ್ಯಕೀಯ ಸಮಸ್ಯೆಯಷ್ಟೇ ಅಲ್ಲದೆ ಸಾಮಾಜಿಕ ಸಮಸ್ಯೆಯಾಗಿಯೂ ಜನರನ್ನು ಕಾಡುತ್ತಿದೆ. ಅಪಸ್ಮಾರ ರೋಗಿಗಳು ಚಿಕಿತ್ಸೆ ಪಡೆಯಬೇಕಾಗುತ್ತದೆ. ಹೀಗಾಗಿ ರೋಗ ಇದ್ದರೂ ಅದನ್ನು ವೈದ್ಯರ ಬಳಿ ಹೇಳಿಕೊಳ್ಳಲು ರೋಗಿಗಳು ಹಿಂದೇಟು ಹಾಕುತ್ತಿದ್ದಾರೆ. ಅಲ್ಲದೆ ಸಮಾಜದಲ್ಲಿ ಇಂಥ ರೋಗಿಗಳು ಜನಸಾಮಾನ್ಯರಂತೆ ಬದುಕಲು ಹಿಂಜರಿಯುತ್ತಾರೆ, ಕೀಳರಿಮೆ ಅವರನ್ನು ಕಾಡುತ್ತದೆ. ಇಂತಹ ರೋಗಿಗೆ ಮದುವೆಯಾಗುವುದು ಕೂಡ ಕಷ್ಟ' ಎಂಬುದು ಡಾ. ರಾಜೇಶ್ ಅಭಿಪ್ರಾಯ.

**(ವೈದ್ಯರ ಸಂಪರ್ಕ: 080–71004500)**